## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/233/ಗ್ರಾಪಂಕಾ/2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 15-03-2014.

**ಇವರಿಂದ:**

ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
**ಬೆಂಗಳೂರು.**

**ಇವರಿಗೆ:**

ಎಲ್ಲಾ ಜಿಲ್ಲಾ ಪಂಚಾಯತಿಗಳ,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಮಾನ್ಯರೆ,

**ವಿಷಯ:** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಡಿಜಿಟಲ್ ಸಹಿ ಮೂಲಕ ನಮೂನೆ-9, 11ಎ ಮತ್ತು 11ಬಿ ಗಳನ್ನು ನೀಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಸಂಖ್ಯೆ ಗ್ರಾಅಪ 83 ಗ್ರಾಪಂಅ 2013 (ಭಾ-6) ದಿ:03-02-2014.
2. ಸರ್ಕಾರದ ಇದೇ ಸಮಸಂಖ್ಯೆಯ ಪತ್ರ ದಿ:10-03-2014.

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳ ಕಡೆಗೆ ತಮ್ಮ ಗಮನ ಸೆಳೆಯಲಾಗಿದೆ.

ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯಲ್ಲಿ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಕ್ರಮಬದ್ಧ ಆಸ್ತಿಗಳಿಗೆ 1) ಗ್ರಾಮ ಠಾಣಾ ವ್ಯಾಪ್ತಿಯೊಳಗಿರುವ ಆಸ್ತಿ/ ನಿವೇಶನ, 2) ವಸತಿ ಯೋಜನೆಯಡಿ ಸೃಜಿಸಿರುವ ಆಸ್ತಿ, 3) ಭೂ ಪರಿವರ್ತನೆಯಾದ ವ್ಯವಸಾಯದ ಜಮೀನಿನಲ್ಲಿ ನಗರಾಭಿವೃದ್ಧಿ ಇಲಾಖೆಯ ಸಕ್ಷಮ ಯೋಜನಾ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆಯೊಂದಿಗೆ ಸೃಜಿಸಲಾದ ಆಸ್ತಿಗಳು ಮತ್ತು 4) Single Plot Approval ನಲ್ಲಿ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ ಪಡೆದ ಆಸ್ತಿಗಳಿಗೂ ನಮೂನೆ-9, ನಮೂನೆ-11ಎ ಗಳನ್ನು ನೀಡಲಾಗುತ್ತಿದೆ.

ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ಕ್ರಮಬದ್ಧವಲ್ಲದ ಆಸ್ತಿಗಳಿಗೆ 1) ದಿನಾಂಕ:14-06-2013 ಕ್ಕಿಂತ ಮುಂಚೆ 1, 2 ಅಥವಾ 3 ಬಾರಿ ಮಾರಾಟ ಹಾಗೂ ಕ್ರಯಗಳಿಗೆ ಒಳಪಟ್ಟಿರುವ ನಿವೇಶನಗಳು, 2) ದಿನಾಂಕ:14-06-2013ಕ್ಕೆ ಮೊದಲು ಕಟ್ಟಡವಾಗಿದ್ದು, ಈ ದಿನಾಂಕಕ್ಕಿಂತ ಮುಂಚಿನ 6 ತಿಂಗಳ ಪೂರ್ವದ ಯಾವುದಾದರೂ ಒಂದು ತಿಂಗಳ ವಿದ್ಯುಚ್ಛಕ್ತಿ ಬಿಲ್‌ನ್ನು ಒದಗಿಸಿರುವ ಪ್ರಕರಣಗಳು, 3) ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಪ್ರಕರಣ 95 (1) ರನ್ವಯ ಫಾರಂ ಬಿಲ್ಡಿಂಗ್ / ಹೌಸ್ ಎಂದು ಪರಿಗಣಿಸುವ ಆಸ್ತಿಗಳು ಮತ್ತು 4) ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಪ್ರಕರಣ 95 (2) ರನ್ವಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ-11ಬಿ ಅನ್ನು ಪಡೆದು ಉಪನೋಂದಾಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಬಹುದೆಂದು ತಿಳಿಸಿರುತ್ತದೆ.

ಗ್ರಾಮ ಪಂಚಾಯತಿಗಳು ನಮೂನೆ-11ಬಿ ನೀಡಿದ ಎಲ್ಲಾ ಆಸ್ತಿಗಳನ್ನು ಉಪನೊಂದಾಣಾಧಿಕಾರಿಗಳು ಕಡ್ಡಾಯವಾಗಿ ನೊಂದಾಯಿಸುವ ಅವಶ್ಯಕತೆ ಇರುವುದಿಲ್ಲ. ಮೇಲ್ಕಂಡ 4 ವಿಧಗಳ ಆಸ್ತಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳು ವಿತರಿಸಿರುವ ನಮೂನೆ-11ಬಿ ರ ಷರಾದ ಆಧಾರದ ಮೇಲೆ ಮಾತ್ರ ಉಪನೊಂದಾಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಬಹುದಾಗಿರುತ್ತದೆ ಎಂದೂ ಹಾಗೂ ಕ್ರಮಬದ್ಧ ಆಸ್ತಿಗಳಿಗೆ ನಮೂನೆ-9, ನಮೂನೆ-11ಎ ಗಳನ್ನು ಹಾಗೂ ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಮೂನೆ-11ಬಿ ಅನ್ನು ಮಾತ್ರ ನೀಡಲಾಗುತ್ತಿದ್ದು, ಅದಕ್ಕೆ ನಮೂನೆ-9 ರ ಅಗತ್ಯವಿರುವುದಿಲ್ಲವೆಂದು ನೊಂದಣಿ ಮಹಾ ಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ರವರಿಗೆ ತಿಳಿಸಲಾಗಿರುತ್ತದೆ.

ಆದುದರಿಂದ, ಮೇಲ್ಕಂಡಂತೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಡಿಜಿಟಲ್ ಸಹಿ ಮೂಲಕ ನಮೂನೆ-9, 11ಎ ಮತ್ತು 11ಬಿ ಗಳನ್ನು ನೀಡುವಂತೆ ತಿಳಿಸಿದೆ.

ಸ್ಥಳೀಯ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯತಿಗಳು ಬಡಾವಣೆ ನಕ್ಷೆಗಳು / ವಿನ್ಯಾಸಗಳಿಗೆ (ಲೇಔಟ್ ಪ್ಲಾನ್) ಸ್ಥಳೀಯ ಯೋಜನಾ ಪ್ರಾಧಿಕಾರದ ಅನುಮೋದನೆ ಪಡೆಯದ ಎಲ್ಲಾ ನಿವೇಶನಗಳು, ಮಾರಾಟವಾಗದೆ ಉಳಿದಿರುವ ನಿವೇಶನಗಳಿಗೆ ಹಾಗೂ ಯಾವುದೇ ನಿವೇಶನಗಳು ಮಾರಾಟವಾಗದೆ ಇರುವ ಬಡಾವಣೆ ನಕ್ಷೆಗಳು / ವಿನ್ಯಾಸಗಳಿಗೆ (ಲೇಔಟ್ ಪ್ಲಾನ್) ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕಾಗುತ್ತದೆ.

ಮುಂದುವರೆದು, ಸ್ಥಳೀಯ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯತಿಗಳು ಬಡಾವಣೆ ನಕ್ಷೆಗಳು / ವಿನ್ಯಾಸಗಳಿಗೆ (ಲೇಔಟ್ ಪ್ಲಾನ್) ನಗರಾಭಿವೃದ್ಧಿ ಇಲಾಖೆಯ ಸಕ್ಷಮ ಪ್ರಾಧಿಕಾರಿಗಳಿಂದ ಅನುಮೋದನೆಯನ್ನು ಕಡ್ಡಾಯವಾಗಿ ಪಡೆಯುವಂತೆ ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರದ ಹೊರಗಡೆ ಇರುವ ಪ್ರದೇಶಗಳಲ್ಲಿರುವ ಆಸ್ತಿಗಳ ಬಡಾವಣೆ ನಕ್ಷೆಗಳು / ವಿನ್ಯಾಸಗಳಿಗೆ (ಲೇಔಟ್ ಪ್ಲಾನ್) ಗ್ರಾಮ ಪಂಚಾಯತಿಗಳ ಕೋರಿಕೆಯ ಮೇರೆಗೆ ಅನುಮೋದನೆಯನ್ನು ನೀಡುವ ಅಧಿಕಾರವನ್ನು ತಾಲ್ಲೂಕು ಪಂಚಾಯತಿಗಳಿಗೆ ನೀಡಲಾಗುತ್ತಿದ್ದು, ಈ ಸಂಬಂಧ ಸರ್ಕಾರವು ಸುತ್ತೋಲೆ ಹೊರಡಿಸಿದ ನಂತರ ಸ್ಥಳೀಯ ಯೋಜನಾ ಪ್ರಾಧಿಕಾರದ ಹೊರಗಡೆ ಇರುವ ಪ್ರದೇಶಗಳ ಆಸ್ತಿಗಳ ಬಡಾವಣೆ ನಕ್ಷೆಗಳು / ವಿನ್ಯಾಸಗಳಿಗೆ (ಲೇಔಟ್ ಪ್ಲಾನ್) ತಾಲ್ಲೂಕು ಪಂಚಾಯತಿಗಳ ಅನುಮೋದನೆ ಪಡೆಯುವಂತೆ ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

17/3/14

(ಕೆ. ಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.